# ಸಿದ್ಧಲಿಂಗ ಪಟ್ಟಣಶೆಟ್ಟಿಗೆ ಕೇಂದ್ರ ಸಾಹಿತ್ಯ ಪ್ರಶಸ್ತಿ

**ಧಾರವಾಡ:** ಹಿರಿಯ ಕವಿ, ಸಾಹಿತಿ ಸಿದ್ಧಲಿಂಗ ಪಟ್ಟಣಶೆಟ್ಟಿ ಅವರ 'ವಿದಿಶಾ ಪ್ರಹಸನ' ಅನುವಾದಿತ ಕೃತಿಗೆ 2024ನೇ ಸಾಲಿನ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಲಭಿಸಿದೆ. ಕಾಳಿದಾಸ ವಿರಚಿತ ಸಂಸ್ಕೃತದ 'ಮಾಲವಿಕಾಗ್ನಿಮಿತ್ರಂ' ನಾಟಕವನ್ನು ಅವರು ಕನ್ನಡಕ್ಕೆ 'ವಿದಿಶಾ ಪ್ರಹಸನ' ಎಂದು ಅನುವಾದಿಸಿದ್ದಾರೆ. ಕನ್ನಡ, ಹಿಂದಿ ಸಾಹಿತ್ಯ



ಕೃಷಿಯಲ್ಲಿ ಪೂರ್ಣ ಪ್ರಮಾಣದಲ್ಲಿ ತೊಡಗಿಸಿ ಕೊಂಡಿರುವ ಅವರ ಅನೇಕ ಕಾವ್ಯ, ಕಥೆ, ಕಾದಂಬರಿ, ಪ್ರಬಂಧ, ಜೀವನ ಚರಿತ್ರೆ, ವಿಮರ್ಶೆ, ವ್ಯಕ್ತಿಚಿತ್ರ ಸಂದರ್ಶನ ಹಾಗೂ ಅನುವಾದಿತ ಕೃತಿಗಳು ಜನಮನ್ನಣೆ ಗಳಿಸಿವೆ. ಹಿಂದಿ, ಮರಾಠಿ, ಉರ್ದು, ಸಂಸ್ಕೃತ ಭಾಷೆಯ 11 ನಾಟಕಗಳನ್ನು ಕನ್ನಡಕ್ಕೆ ಅನುವಾದಿಸಿದ್ದಾರೆ. ಕಾಳಿದಾಸನ 'ಮಾಲವಿಕಾಗ್ನಿ ಮಿತ್ರಂ' ಮೂಲ ನಾಟಕವನ್ನು ಹಾಗೇ ಇಟ್ಟುಕೊಂಡು ಅದರಲ್ಲಿನ ಹಾಡುಗಳನ್ನು ಬೆಳೆಸಿದ್ದೇನೆ. ವಿದಿಶಾ ಎಂಬುದು ನಾಟಕ ನಡೆಯುವ ರಾಜಧಾನಿಯ ಹೆಸರು. ಅಪತಾ ತಪರಾ ಎಂಬೆರಡು ಪಾತ್ರಗಳನ್ನು ಹೆಚ್ಚುವರಿಯಾಗಿ ಸೇರಿಸಿದ್ದೇನೆ. ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಸಿಕ್ಕಿರುವುದು ಸಂತೋಷದ ಸಂಗತಿ ಎಂದು ಪಟ್ಟಣಶೆಟ್ಟಿ ಹೇಳಿದರು.